

ಮಹಿಳೆಯೊಬ್ಬಳ ಬದುಕಿನಲ್ಲಿ ನಡೆಯುವ ಒಂದು ಆಕಸ್ಮಿಕ ಘಟನೆಯ ಮೂಲಕ ಬದುಕು, ಸಮಾಜ, ಮಹಿಳೆಯ ಸ್ಥಾನಮಾನಗಳ ಕುರಿತು ಜಿಜ್ಞಾಸೆ ಹುಟ್ಟಿಸುವ ಕಿರುಚಿತ್ರವಿದು.

■ ಗೌರಿ

# ಭಾವ ಕನ್ನಡಿಯಲ್ಲಿ ಬದುಕಿನ ದರ್ಶನ

'ಸೂಪರ್ ವುಮನ್' ಎಂಬ ಕಾನ್ಸೆಪ್ಟ್ ಇತ್ತೀಚೆಗೆ ಬಹುಜನಪ್ರಿಯವಾಗಿರುವ ನುಡಿಗಟ್ಟು. ಮಹಿಳೆ ಯಾವುದರಲ್ಲಿಯೂ ಪುರುಷನಿಗೆ ಕಡಿಮೆಯಲ್ಲ ಎಂಬುದನ್ನು ಗಟ್ಟಿಯಾಗಿ ಹೇಳುವ ಉದ್ದೇಶದಿಂದ ಹುಟ್ಟಿಕೊಂಡ ನುಡಿಗಟ್ಟಿದು. ಮನೆಯೊಳಗಿನ ಕೆಲಸಕ್ಕೇ ಮಹಿಳೆಯನ್ನು ಸೀಮಿತಗೊಳಿಸಬೇಕಾಗಿಲ್ಲ. ಅವಳು ಮನೆಯ ಕೆಲಸದ ಜೊತೆಜೊತೆಗೇ ಹೊರಗಿನ ಕೆಲಸವನ್ನೂ ನಿಭಾಯಿಸಬಲ್ಲಳು. ಅವಳು ಗಂಡಿನ ಅವಲಂಬನೆಯಿಲ್ಲದೆ ಬದುಕನ್ನು ಕಟ್ಟಿಕೊಳ್ಳಬಲ್ಲಳು ಎಂಬ ವಾದದ ಪ್ರತಿಧ್ವನಿಯಾಗಿ ಈ ನುಡಿಗಟ್ಟು ಹುಟ್ಟಿಕೊಂಡಿದೆ.

ಆದರೆ ಇನ್ನೊಂದು ದಿಕ್ಕಿನಿಂದ ನೋಡಿದರೆ ಈ ನುಡಿಗಟ್ಟಿನ ವ್ಯಾಖ್ಯಾನಗಳು ಮಹಿಳೆಯ ಮೇಲೆ ಇಲ್ಲದ ಭಾರವನ್ನು ಹೊರಿಸಿದ್ದೂ ತಿಳಿಯುತ್ತದೆ. ಪುರುಷನಿಗೆ ಸಮಳೆಂದು ಸಾಬೀತುಪಡಿಸಿಕೊಳ್ಳಲು ಅವಳು ಯಾಕೆ ಮನೆಯೊಳಗೆ ಹೊರಗೆ ಎರಡೂ ದುಡಿಯಬೇಕು? ಗಳಿಕೆ, ದುಡಿಮೆಯಷ್ಟೇ ಸಮತೆಯ ಮಾನದಂಡಗಳೇ? ಆ ಚಕ್ರಕ್ಕೆ ಸಿಕ್ಕ ಅವಳ ಮಾನಸಿಕತೆಯ ಮೇಲೆ ಬಿದ್ದಿರುವ ಒತ್ತಡ ಎಂಥದ್ದು? ಈ ಎಲ್ಲ ಪ್ರಶ್ನೆಗಳೂ 'ಸೂಪರ್ ವುಮನ್' ಎಂಬ ನುಡಿಗಟ್ಟಿನ ಜೊತೆಜೊತೆಗೇ ಮುನ್ನಲೆಗೆ ಬಂದಿವೆ.

ಈ ಚರ್ಚೆಗಳೇನೇ ಇದ್ದರೂ ಮಹಿಳೆಗೆ ಬದುಕನ್ನು ಕಟ್ಟಿಕೊಳ್ಳುವಲ್ಲಿ ಈ ಸಮಾಜ ಎಸೆಯುವ ಸವಾಲುಗಳು ಹೆಚ್ಚೇ ಆಗಿರುತ್ತವೆ ಮತ್ತವು ಹಲವು ಸಲ ಕ್ರೂರವೂ ಆಗಿರುತ್ತವೆ. ಎಳೆಯ ಮಗುವನ್ನು ನಿಭಾಯಿಸುವುದರ ಜೊತೆಗೇ ಜೀವನನಿರ್ವಹಣೆಗೆ ದುಡಿದು ಹಣಗಳಿಸಬೇಕಾದ ಅನಿವಾರ್ಯಕ್ಕೆ ಸಿಲುಕಿರುವ ಸಿಂಗಲ್ ಪೇರೆಂಟ್ ಮಹಿಳೆಯೊಬ್ಬಳ ಕಥೆಯನ್ನು 'ಸಿಮೋನ್' ಕಿರುಚಿತ್ರ ಹೇಳುತ್ತದೆ.

ಹೆಸರು: ಸಿಮೋನ್ (ಇಂಗ್ಲಿಷ್)
ನಿರ್ದೇಶನ: ಐಶಾ ಅಮಿನ್
ನಿರ್ಮಾಣ: ಆ್ಯನಿ ನಿಂಗ್,
ಕ್ಯಾಮರಾನ್ ಮಾರ್ಟಿನ್
ಛಾಯಾಗ್ರಹಣ: ಆಲಿವರ್
ಲ್ಯಾಂಜೆನ್‌ಬರ್ಗ್
ಧ್ವನಿ: ಸ್ಯಾಮ್ ಬೆಸ್ಟ್
ಸಂಕಲನ: ಜಾಮಿನ್ ಲ್ಯಾನ್ಸ್‌ಡೌನ್
ತಾರಾಗಣ: ಕ್ರೀ ಕ್ರೀ ಮೆಕ್‌ಲೆಲನ್,
ಮುಜಾಂ ವಾಷಿಂಗ್ಟನ್

ಇಲ್ಲಿರುವುದು ಒಂದು ಸಣ್ಣ ಘಟನೆ. ಆ ಘಟನೆಯ ನಮ್ಮೊಳಗೆ ಎಬ್ಬಿಸುವ ಭಾವತರಂಗಗಳು ಮಾತ್ರ ತೀವ್ರವಾದವು. ತೀರಾ ಖಾಸಗಿಯಾದ ಅನುಭವದ ಮೂಲಕವೇ ಜಾಗತಿಕವಾದ ಸಮಸ್ಯೆಯೊಂದರತ್ತಲೂ ಬೆಳಕು ಚೆಲ್ಲುವುದು ಈ ಕಿರುಚಿತ್ರದ ಶಕ್ತಿ.

ಕಥಾನಾಯಕಿಗೆ ಈಗಿನ್ನೂ ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ನಡೆಯಲು ಶುರುಮಾಡಿರುವ ಮಗನಿದ್ದಾನೆ. ಅವನ್ನು ಡೇಕೇರ್‌ಗೆ ಬಿಟ್ಟು ತಾನು ಕೆಲಸಕ್ಕೆ ಹೋಗಬೇಕಾದ ಅನಿವಾರ್ಯತೆ ಅವಳದ್ದು. ಹಾಗೆ ಡೇಕೇರ್‌ಗೆ ಹೋಗಲೆಂದು ರೈಲಿಗೆ ಕಾಯುತ್ತಿದ್ದಾಗ, ಅವಳಿಗೆ ಕೆಲಸದ ಫೋನ್ ಬರುತ್ತದೆ. ಅದರಲ್ಲಿ ಮಾತಾಡುತ್ತಿರುವಾಗಲೇ ರೈಲು ಬರುತ್ತದೆ. ಮಾತಾಡುತ್ತಲೇ ಮಗುವನ್ನು ರೈಲಿನ ಒಳಗೆ ಕೂರಿಸಿ, ಹೊರಗೆ ಬಂದು ಬ್ಯಾಗ್ ಎತ್ತಿಕೊಂಡು ರೈಲು ಹತ್ತಬೇಕು ಅನ್ನುವಷ್ಟರಲ್ಲಿ ರೈಲಿನ ಬಾಗಿಲು ಹಾಕಿಕೊಂಡು ಬಿಡುತ್ತದೆ. ನೋಡ ನೋಡುತ್ತಿದ್ದ ಹಾಗೆಯೇ ರೈಲು ವೇಗವಾಗಿ ಹೊರಟು ಬಿಡುತ್ತದೆ.

ಹೆತ್ತ ತಾಯಿಯ ಸಂಕಟ, ಮಗುವಿಗೆ ಅಪಾಯ ಒದಗಿಬಂದಾಗ ಅವಳ ಚಡಪಡಿಕೆ, ಅದಕ್ಕೆ ತಾನೇ ಕಾರಣನಾದೆನೆಂಬ ಅಪರಾಧಿ ಪ್ರಜ್ಞೆ ಎಲ್ಲವೂ ಇಲ್ಲಿ ತುಂಬ ತೀವ್ರವಾಗಿ ಬಂದಿದೆ. ನಾಯಕಿ ಮಗುವನ್ನು ಅರಸಿಕೊಂಡು ಮುಂದಿನ ಸ್ಟೇಷನ್‌ವರೆಗೆ ಓಡಿಕೊಂಡೇ ಹೋಗುತ್ತಾಳೆ. ಅಷ್ಟರಲ್ಲಿ ಅಲ್ಲಿಯೂ ರೈಲು ಹೊರಟುಬಿಟ್ಟಿರುತ್ತದೆ. ದಿಕ್ಕೆಟ್ಟುನಿಂತಿರುವಾಗ ಮಗುವಿನ ಅಳು ಕೇಳಿಸುತ್ತದೆ. ಯಾರೋ ಪ್ರಯಾಣಿಕರು ಒಂಟಿ ಮಗುವನ್ನು ಗಮನಿಸಿ ಎತ್ತಿಕೊಂಡು ಸ್ಟೇಷನ್‌ನಲ್ಲಿ ಇಳಿದಿರುತ್ತಾರೆ.

ಆ ಕ್ಷಣದ ದಿಗಿಲು, ಮಗು ಮತ್ತೆ ಸಿಕ್ಕಾಗ ಕಟ್ಟೊಡೆವ ಸಂಭ್ರಮ ಈ ಎರಡೂ ಈ ಕಿರುಚಿತ್ರದ ಜೀವಕೇಂದ್ರಗಳು. ಬದುಕಿನಲ್ಲಿ ಯಾವುದು ಮುಖ್ಯ ಎಂಬುದು ಅದು ನಮ್ಮನ್ನು ತೊರೆದಾಗಲೇ ಗೊತ್ತಾಗುವುದು. ಮತ್ತದು ಸಿಕ್ಕಾಗ ಸಿಕ್ಕುವ ಸಂಭ್ರಮ ಬೇರೆಯೇ ರೀತಿಯದ್ದು. ಹೀಗೆ ಅಮ್ಮ–ಮಗುವಿನ ಅಗಲುವಿಕೆ ಮತ್ತು ಕೂಡುವಿಕೆಯಲ್ಲಿ ನಿರ್ದೇಶಕರು ಬದುಕಿನ ಜೀವದ್ರವ್ಯಗಳನ್ನು ಕಾಣಿಸುವುದರ ಜೊತೆಗೆ ಇಂದಿನ ಆಧುನಿಕ ಮಹಿಳೆಯ ಬದುಕಿನ ಸವಾಲುಗಳ ಕುರಿತೂ ಪ್ರಶ್ನೆಗಳನ್ನು ಹುಟ್ಟಿಸುತ್ತಾರೆ.

ಈ ಕಿರುಚಿತ್ರ ವೀಕ್ಷಣೆಗೆ https://bit.ly/3Up3H2F ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.